CC. No.: 380-2010
C.W. :- 06 and PW-19

# ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ ಜೆ ಎಂ ನ್ಯಾಯಾಲಯ, ರಾಯಚೂರು.

ಸಿ ಸಿ ಸಂಖ್ಯೆ **380/2010**

| | |
|---|---|
| ಹೆಸರುಃ | ಶ್ರೀಮತಿ ವಿಜಯಲಕ್ಷ್ಮೀ |
| ಗಂಡಃ | ಹನುಮಂತರಾಯ |
| ವಯಸ್ಸುಃ | *45* ವರ್ಷ |
| ಉದ್ಯೋಗಃ | ಗೃಹಿಣಿ |
| ವಿಳಾಸಃ | ಎಲ್ ಬಿ ಎಸ್ ನಗರ, ರಾಯಚೂರು. |

## ದಿನಾಂಕಃ 08-03-2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು

**ಮುಖ್ಯ ವಿಚಾರಣೆಃ** ಮಾನ್ಯ ಎ ಪಿ ಪಿ ಅವರಿಂದಃ

ನನಗೆ ಆರೋಪಿತರ ಪರಿಚಯ ಇರುತ್ತದೆ. ನನಗೆ ಸುಲೋಚನಾ ಹಾಗು ಬಸ್ಸಮ್ಮ ಎನ್ನುವವರ ಪರಿಚಯ ಇರುತ್ತದೆ. ಅವರಿಬ್ಬರು ಅಂಗನವಾಡಿಯಲ್ಲಿ ಶಿಕ್ಷಕಿಯರೆಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಸದರಿಯವರಿಬ್ಬರು ಯಾವುದೇ ಚೀಟಿ ವ್ಯವಹಾರ ಮಾಡುತ್ತಿರಲಿಲ್ಲ ಹಾಗೂ ನಾನು ಅವರ ಹತ್ತಿರ ಯಾವುದೇ ಚೀಟಿ ಹಣ ಹಾಕಿರುವುದಿಲ್ಲ. ನಾನು ಹಾಗೂ ನನ್ನ ಪರವಾಗಿ ಹಾಗೂ ನಮ್ಮ ಮನೆಯ ಪಕ್ಕದ ಸದಸ್ಯರು ಕೂಡ ಸದರಿಯವರ ಹತ್ತಿರ ಯಾವುದೇ ಚೀಟಿ ಹಣ ಹಾಕಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ರಸೀತಿಗಳನ್ನು ಕೊಟ್ಟಿರುವುದಿಲ್ಲ. ರಂಗಣ್ಣ ಹಾಗೂ ರಘುನಾಥ ಎನ್ನುವವರು

ತಮ್ಮಂದಿರು. ರಾಹುಲ್ ಎನ್ನುವವರು ನನ್ನ ಮಗ, ಪಾಂಡುರಂಗ ಎನ್ನುವವರು ನನ್ನ ಅಣ್ಣ. ಸಾಕ್ಷಿಯು ನಿಪಿ-52 ರಿಂದ 54 ಇವುಗಳನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ತಮ್ಮ ಮಗ ರಾಹುಲ್ ಇವರ ಸದಸ್ಯತ್ವದ ಪತ್ರವನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗ ನಿಪಿ-55 ಎಂದು ಗುರುತಿಸಲಾಯಿತು.

( **ಈ ಹಂತದಲ್ಲಿ ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ಕೊಡಲಾಯಿತು**.)

**ಪಾಟೀ ಸವಾಲುಃ** ಮಾನ್ಯ ಎಪಿಪಿ ಅವರಿಂದಃ

ಸದರಿ ಸುಲೋಚನಾ ಹಾಗೂ ಬಸ್ಸಮ್ಮ ಇವರು ಶ್ರೀ ಗಂಗಾಧರ ಸ್ವಾಮಿ ಲಕ್ಕಿ ಫ್ಯಾಮಿಲಿ ಹೋಮ್ ಎನ್ನುವ ಚೀಟಿಯ ವ್ಯವಹಾರವನ್ನು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸದರಿ ಬಸ್ಸಮ್ಮ ಹಾಗೂ ಸುಲೋಚನಾ ಇವರ ಮನೆ ಪಕ್ಕ ವಾಸ ಮಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ನನ್ನ ಮಗ ರಾಹುಲ್ ಹಾಗೂ ನನ್ನ ಸದರಿ ಅಣ್ಣಂದಿರು ಇವರು ಸದರಿ ಚೀಟಿಯ ಸದಸ್ಯರು ಆಗಿದ್ದೇವು ಎಂದರೆ ಸರಿಯಲ್ಲ. ನಾವು ಪ್ರತಿಯೊಬ್ಬರು ಚೀಟಿ ಹಣಕ್ಕಾಗಿ ಪ್ರತಿ ತಿಂಗಳು ತಲಾ 5000 ರೂ ಗಳನ್ನು ಕಟ್ಟುತ್ತಿದ್ದೇವು ಎಂದರೆ ಸರಿಯಲ್ಲ. ಸದರಿಯವರು ನಮ್ಮಗಳಿಗೆ 10 ಸಾವಿರ ರೂಗಳನ್ನು ಲಕ್ಕಿ ಡ್ರಾ ಎಂದು ಕೊಡುತ್ತಿದ್ದರು ಎಂದರೆ ಸರಿಯಲ್ಲ. ನಮಗೆ ಹಣ ಬರದ ಕಾರಣ ನಾವು ಸಾಕಷ್ಟು ಸಲ ಸದರಿಯವರಿಗೆ ಹಣದ ಬಗ್ಗೆ ಕೇಳಲು ಹೋಗಿರುತ್ತೇವೆ ಎಂದರೆ ಸರಿಯಲ್ಲ. ನಾನು, ನನ್ನ ಮಗ ಹಾಗೂ ಸದರಿ ಅಣ್ಣಂದಿರು ಸೇರಿ ಸದರಿಯವರು ಒಟ್ಟು 17 ಸಾವಿರ ರೂ ಕಟ್ಟಿದ್ದೇವು ಎಂದರೆ ಸರಿಯಲ್ಲ. ಸದರಿ ಪದ್ದಮ್ಮ, ಶರಣಮ್ಮ, ಮಲ್ಲಮ್ಮ , ನಾಗರತ್ನ ಇವರು ಕೂಡ ಹಣವನ್ನು ಸದರಿಯವರ ಹತ್ತಿರ ಕಟ್ಟಿದ್ದರು ಎಂದರೆ ಸರಿಯಲ್ಲ. ಅವರಿಗೂ ಕೂಡ ಸದರಿ

ಸುಲೋಚನಾ ಹಾಗೂ ಬಸ್ಸಮ್ಮ ಹಣ ಕೊಟ್ಟಿರುವುದಿಲ್ಲ ಎಂದು  ನಾನು ನನ್ನ ಹೇಳಿಕೆಯನ್ನು ಪೋಲೀಸರಿಗೆ  ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿ ಕೊಳ್ಳದ ಸಾಕ್ಷಿಯ ಸದರಿ ಹೇಳಿಕೆ ಭಾಗವನ್ನು ನಿಪಿ-56 ಎಂದು ಗುರುತಿಸಲಾಯಿತು. ನಿಪಿ-52 ರಿಂದ 55 ನ್ನು ಪೋಲೀಸರಿಗೆ ನಾನು ವಿಚಾರಣೆ ಮಾಡಲು ಬಂದಾಗ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.  ನಾನು ಮತ್ತು ನನ್ನ ಕುಟುಂಬದ ಜನರು ಚೀಟಿ ವ್ಯವಹಾರ ಹಣವನ್ನು ತೊಡಗಿಸಿ ನಿಪಿ-56 ರಂತೆ ಹೇಳಿಕೆಯನ್ನು ಕೊಟ್ಟಿದ್ದು, ನಿಪಿ-52 ರಿಂದ 55 ರಂತೆ ಸದಸ್ಯತ್ವವನ್ನು  ಪಡೆದರು ಸಹಿತ ಆರೋಪಿತರ ಪರಿಚಯ ಇರುವುದರಿಂದ ಅವರಿಗೆ  ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**( ತೆರೆದ ನ್ಯಾಯಾಲಯದಲ್ಲಿ  ಸಾಕ್ಷಿಯ ಹೇಳಿಕೆಯನ್ನು  ಉಖ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
**ರಾಯಚೂರು.**